



## ನಕ್ಕುಬಿಡಿ

ಮೇಷ್ಟ್ರು: ಗುಂಡ ನೀನು ಜೋಕ್‌ಗಳನ್ನು ಹೇಳಿ ತುಂಬಾ ನಗಿಸುತ್ತೀಯಂತೆ. ಈಗ ಒಂದು ಜೋಕ್ ಹೇಳು.

ಗುಂಡ: ನೀವು ತುಂಬಾ ಚೆನ್ನಾಗಿ ಪಾಠ ಮಾಡುತ್ತೀರಾ ಸಾರ್.

★★★

ಹೆಂಡತಿ: ಯಾಕ್ರೀ ಅವನಿಗೆ ಹಾಗೆ ಹೊಡೀತಾ ಇದೀರಾ?

ಗಂಡ: ನೋಡು ಇವನ ಮರೆವು! ಪುಸ್ತಕಗಳನ್ನು ತೆಗೆದುಕೊಳ್ಳದೆ ಬರಿಗೈಯಲ್ಲಿ ಸ್ಕೂಲಿಗೆ ಹೋಗ್ತಾ ಇದಾನೆ.

ಹೆಂಡತಿ: ನಿಮ್ಮ ಮರೆವಿಗಿಷ್ಟು ಬೆಂಕಿ ಹಾಕ! ಅವನು ನಮ್ಮ ಮಗನಲ್ಲ! ಪಕ್ಕದ ಮನೆಯ ಹುಡುಗ.

★★★

ಪೊಲೀಸ್: ಮೂವರು ಬೈಕಿನಲ್ಲಿ ಹೋಗಬಾರದು ಅಂತ ಗೊತ್ತಿಲ್ಲವಾ?

ಗುಂಡ: ಗೊತ್ತು ಸಾರ್! ಅದಕ್ಕೆ ಒಬ್ಬನನ್ನು ವಾಪಸ್ ಮನೆಗೆ ಬಿಟ್ಟು ಬರಲು ಹೋಗ್ತಾ ಇದ್ದೀನಿ.

★★★

ಗುಂಡ, ನಾಣಿ ಇಬ್ಬರೂ ಕುಡಿಯಲು ಹೋಗಿದ್ದರು.

ಗುಂಡ: ಮುಂದೆ ಆ ಮೂರು ಮರಗಳಿವೆಯಲ್ಲ, ಅವು ಆರಾಗಿ ಕಾಣಿಸುವವರೆಗೂ ನಾವು ಇವತ್ತು ಕುಡಿದು ಮಜಾ ಮಾಡೋಣ.

ಸಪ್ಲೈಯರ್ ನಗುತ್ತ ಹೇಳಿದ– ಸುಮ್ಮನಿರಿ ಸಾರ್! ಅಲ್ಲಿರುವುದು ಒಂದೇ ಮರ.

(ಸಂಗ್ರಹ) ಎಂ.ಕೆ.ಮಂಜುನಾಥ್, ಬೆಂಗಳೂರು

ನಾಣಿ: ಇದೇನಿದು ಈ 96 ವರ್ಷದ ಮುದುಕ ಈಗಲೂ ಯಾಕೆ ಕೋರ್ಟಿಗೆ ಬರುತ್ತಿದ್ದಾನೆ?

ಗುಂಡ: ಇವನು 25 ವರ್ಷದವನಾಗಿದ್ದಾಗ ಮಾಡಿದ್ದ ಅತ್ಯಾಚಾರದ ಕೇಸ್ ಇನ್ನೂ ಮುಗಿದಿಲ್ಲ, ಅದಕ್ಕೆ.

★★★

ದೇವಸ್ಥಾನಕ್ಕೆ ಹೋದ ಗುಂಡ ಚಪ್ಪಲಿ ಬಿಡುವಾಗ ಅದರ ಒಂದು ಫಲಕ ತೂಗು ಹಾಕಿದ– 'ನನ್ನ ಚಪ್ಪಲಿ ಕದಿಯುವ ಪ್ರಯತ್ನ ಮಾಡಬೇಡ. ನಾನು ಬಾಕ್ಸಿಂಗ್ ಚಾಂಪಿಯನ್.'

ಮತ್ತೆ ಅವನು ಹೊರ ಬಂದಾಗ ಅವನ ಚಪ್ಪಲಿ ಕಾಣಲಿಲ್ಲ. ಬದಲಾಗಿ ತೂಗುಫಲಕ ನೇತಾಡುತ್ತಿತ್ತು– 'ನನ್ನನ್ನು ಹಿಡಿಯುವ ಪ್ರಯತ್ನ ಮಾಡಬೇಡ. ನಾನು ಒಲಿಂಪಿಕ್ಸ್ ರೇಸ್ ಚಾಂಪಿಯನ್.'

★★★

---



'ನೋಡಿ, ನಿಮ್ಮ ಮಗ ಕಲ್ಲು ಹೊಡೆದು ನಮ್ಮ ಮನೆಯ ಕಿಟಕಿ ಗ್ಲಾಸ್‌ಗಳನ್ನು ಒಡೆದು ಹಾಕಿದ್ದಾನೆ.'

'ದಯವಿಟ್ಟು ಅವನ ಈ ಕಿತಾಪತಿಯನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಅವನು ಅರೆ ಹುಚ್ಚ.'

'ಹಾಗಾದ್ರೆ ಅವನು ನಿಮ್ಮ ಮನೆಯ ಗ್ಲಾಸ್‌ಗಳಿಗೆ ಯಾಕೆ ಕಲ್ಲು ಹೊಡೆಯೋಲ್ಲ?'

'ಆದರೆ ಅವನು ಅರೆ ಬುದ್ಧಿವಂತನೂ ಹೌದು!'

★★★

'ಡಾಕ್ಟರ್, ಕಳೆದ ಕೆಲವು ತಿಂಗಳುಗಳಿಂದ ನನಗೆ ಮರೆವಿನ ಕಾಯಿಲೆ ಹಿಡಿದಿದೆ! ಅನಿವಾರ್ಯ ಕೆಲಸಗಳೂ ಸಹ ಮರೆತು ಹೋಗ್ತವೆ.'

'ನೀವು ಮದ್ಯಸೇವನೆಯನ್ನು ಬಿಟ್ಟುಬಿಡಿ. ಮದ್ಯದ ನೇರ ದುಷ್ಪರಿಣಾಮ ಮೆದುಳಿನ ಮೇಲಾಗುತ್ತದೆ'– ಡಾಕ್ಟರ್ ಸಲಹೆಯಿತ್ತರು.

'ಡಾಕ್ಟರ್, ನೀವು ಹೇಳೋದು ನಿಜ. ನನ್ನ ಪರಿಸ್ಥಿತಿ ಏನಾಗುತ್ತಿದೆ ಎಂದರೆ ಒಮ್ಮೊಮ್ಮೆ ನನಗೆ ಮೂರನೆಯ ಮತ್ತು ನಾಲ್ಕನೆಯ ಪೆಗ್ ತಗೊಳ್ಳೋದೂ ಸಹ ಮರೆತು ಹೋಗುತ್ತೆ'– ರೋಗಿ ಅತೀವ ದುಃಖವನ್ನು ವ್ಯಕ್ತಪಡಿಸಿದ.

(ಸಂಗ್ರಹ) ಡಿ.ಎನ್.ಶ್ರೀನಾಥ್, ಶಿವಮೊಗ್ಗ


ಕೆಬಿಎಲ್
ಕೃಷಿಕ್ ಸಿಂಚನ
ನೀರಾವರಿ ಅಭಿವೃದ್ಧಿ ಸಾಲ ಯೋಜನೆ



ಉದ್ದೇಶ:
ಹೊಸ ಪಂಪ್‌ಸೆಟ್ / ಡೀಸಿಲ್ ಇಂಜಿನ್ ಖರೀದಿ/ ತುಂತುರು ಹನಿ ನೀರಾವರಿ ವ್ಯವಸ್ಥೆ ಅಳವಡಿಕೆ/ ಬಾವಿ/ ಕೆರೆ/ ಜಲಾಶಯ / ತಡೆಗೋಡೆ ನಿರ್ಮಾಣ ಇತ್ಯಾದಿ ನೀರಾವರಿ ಅಭಿವೃದ್ಧಿ ಚಟುವಟಿಕೆಗಳು.

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

ಕರ್ಣಾಟಕ ಬ್ಯಾಂಕ್ ಲಿ.